**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಕಡೂರು.**

**ದಿನಾಂಕ 15.07.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು : ಶ್ರೀ.ಹೆಚ್.ಹೆಚ್. 5 ನೇ ಪ್ರತಿವಾದಿ ಪರ ವಕೀಲರಿಂದ**

ನಾನು ಪ್ರಸ್ತುತ ಕಡೂರಿನಲ್ಲಿ ಸುಮಾರು 20 ವರ್ಷಗಳಿಂದ ವಾಸವಿದ್ದೇನೆ. ನಾನು ಮನೆ ಕೆಲಸ ಮಾಡುತ್ತೇನೆ. ನನಗೆ ಇಬ್ಬರು ಮಕ್ಕಳು, ಅವರೆಂದರೆ ಶಿವರಾಜು ಮತ್ತು ಮೀನಾ. ಮೀನಾ ಮೃತಳಾಗಿದ್ದಾಳೆ. ನನ್ನ ಮಗಳು ಅನಾರೋಗ್ಯದಿಂದ ಮೈಸೂರಿನ ಕೊಲಂಬಿಯಾ ಏಷಿಯಾ ಆಸ್ಪತ್ರೆಯಲ್ಲಿ 2009 ಅಥವಾ 2010 ರಂದು ಮೃತರಾದರು. ನನ್ನ ಮಗಳ ಆಸ್ಪತ್ರೆ ಖರ್ಚಿಗಾಗಿ 5 ನೇ ಪ್ರತಿವಾದಿಯು ಮೂರು ಲಕ್ಷ ಹಣ ನೀಡಿದ್ದರು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನನ್ನ ಮಗ 5 ನೇ ಪ್ರತಿವಾದಿಯ ಕಲ್ಲಿನ ಅಂಗಡಿಯಲ್ಲಿ 5 ವರ್ಷಗಳ ಕಾಲ ಕೆಲಸ ಮಾಡಿದ್ದಾರೆ. ವರ್ಷಕ್ಕೆ ಒಂದೂವರೆ ಲಕ್ಷ ಹಣ ನೀಡುವುದಾಗಿ 5 ನೇ ಪ್ರತಿವಾದಿಯು ನನ್ನ ಮಗನಿಗೆ ತಿಳಿಸಿದ್ದರು. ಆದರೆ 5 ನೇ ಪ್ರತಿವಾದಿಯು ನನ್ನ ಮಗನಿಗೆ ದುಡಿದ ಯಾವುದೇ ಹಣವನ್ನು ಇಲ್ಲಿಯವರೆಗು ನೀಡಿರುವುದಿಲ್ಲ. ಆ ಕಾರಣದಿಂದಾಗಿ 5 ನೇ ಪ್ರತಿವಾದಿಯು ಆಸ್ಪತ್ರೆ ವೆಚ್ಚಕ್ಕೆಂದು ನೀಡಿದ್ದ ಹಣವನ್ನು ಮರು ಪಾವತಿಸಿಲ್ಲ ಎಂದು ನುಡಿಯುತ್ತಾರೆ.

ನನ್ನ ಗಂಡ ವ್ಯವಸಾಯ ಮಾಡುತ್ತಾರೆ. ನನ್ನ ಗಂಡ ಈಗ ಬೀರೂರಿನ ಗಾಳಿಹಳ್ಳಿಯಲ್ಲಿ ವಾಸವಿದ್ದಾರೆ. ನಾನು ಗಂಡನೊಂದಿಗೆ ವಾಸವಿಲ್ಲ. ನನ್ನ ಮಗ 5 ನೇ ಪ್ರತಿವಾದಿಯೊಂದಿಗೆ ಕೆಲಸ ಮಾಡುವಾಗ ಮತ್ತು ನನ್ನ ಮಗಳು ಮೃತರಾಗುವ ಕಾಲಕ್ಕೆ ನಾನು ಕಡೂರಿನಲ್ಲಿ ವಾಸವಾಗಿದ್ದೆ. ನಾನು

ಬಾಡಿಗೆ ಮನೆಯಲ್ಲಿ ವಾಸವಿದ್ದೇನೆ. ನಾನು ಒಬ್ಬಳೆ ಕಡೂರಿನಲ್ಲಿ ವಾಸವಾಗಿದ್ದಾಗ, 5 ನೇ ಪ್ರತಿವಾದಿಯು ಬಾಡಿಗೆ ಹಣ ಮತ್ತು ನನ್ನ ಖರ್ಚುಗಳನ್ನು ನೋಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ನಾನು ಮನೆ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದೇನೆ ಎಂದು ನುಡಿಯುತ್ತಾರೆ.

ದಾವಾ ಅನುಸೂಚಿ-1, 3 ಮತ್ತು 5 ರ ಸ್ವತ್ತುಗಳನ್ನು 5 ನೇ ಪ್ರತಿವಾದಿಯು ನನ್ನ ಅಣ್ಣನಾದ ಮೃತ ಗಿರಿಯಪ್ಪರವರಿಂದ ಖರೀದಿಸಿದ್ದರು ಎಂದರೆ ಗೊತ್ತಿಲ್ಲ. ನಂತರ ನಾನು ಸದರಿ ಸ್ವತ್ತುಗಳ ಖಾತೆ ಬದಲಾವಣೆಯಾಗದಂತೆ ತಕರಾರು ಸಲ್ಲಿಸಿದ್ದೆ ಎಂದರೆ ಸರಿಯಲ್ಲ. 2009-10 ನೇ ಸಾಲಿನಲ್ಲಿ ನನ್ನ ಮಗಳು ಮೃತರಾದಾಗ, ನನ್ನ ಮಗಳ ವೈದ್ಯಕೀಯ ಖರ್ಚುಗಳಿಗಾಗಿ 5 ನೇ ಪ್ರತಿವಾದಿಯಿಂದ ಮೂರು ಲಕ್ಷ ಹಣವನ್ನು ಪಡೆದು, ದಾವಾ ಸ್ವತ್ತುಗಳ ಸಂಬಂಧ ತಮ್ಮ ಹಕ್ಕಿನ ಬಾಬ್ತು ಒಪ್ಪಿಗೆ ಪತ್ರ ಬರೆದುಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಅಲ್ಲದೆ ನನ್ನ ಜೊತೆಗೆ 1, 2 ಮತ್ತು 6 ನೇ ಪ್ರತಿವಾದಿಗಳೂ ಸಹ ಒಪ್ಪಿಗೆ ಪತ್ರವನ್ನು 5 ನೇ ಪ್ರತಿವಾದಿಗೆ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

3 ನೇ ಪ್ರತಿವಾದಿಯ ಅಣ್ಣ ನನ್ನ ಗಂಡ ಎಂದರೆ ಸರಿ. ನನ್ನ ಗಂಡನ ಹೆಸರು ಲಕ್ಷ್ಮಣ. ಸುಮಾರು 5 ವರ್ಷಗಳ ಕಾಲ ನಾನು ಮತ್ತು ನನ್ನ ಗಂಡ ಅನ್ಯೋನ್ಯವಾಗಿದ್ದೆವು. ನಾನು ನನ್ನ ಗಂಡನ ವಿರುದ್ಧ ಜೀವನಾಂಶಕ್ಕೆ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಸಾಕ್ಷಿಯು ಸ್ವತಃ ನಾನು ಮತ್ತು ನನ್ನ ಮಗಳು ಅನರೋಗ್ಯಕ್ಕೆ ಒಳಗಾಗಿದ್ದು, ಆ ಸಮಯದಲ್ಲಿ ನಮ್ಮ ವಕೀಲರು ನಮಗೆ ತಿಳಿಯದಂತೆ ಸದರಿ ಜೀವನಾಂಶದ ಅರ್ಜಿಯನ್ನು ವಜಾಗೊಳಿಸಿದ್ದರು ಎಂದು ನುಡಿಯುತ್ತಾರೆ. ನನ್ನ ಮಗ ನನ್ನ ಗಂಡನ ವಿರುದ್ಧ ಭಾಗಾಂಶ ದಾವೆ ಸಲ್ಲಿಸಿಲ್ಲ.

2009 ರಲ್ಲಿ ವಾದಿ ಮತ್ತು ಪ್ರತಿವಾದಿಗಳ ಕುಟುಂಬದಲ್ಲಿ ವಿಭಾಗವಾಗಿತ್ತು ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲದೆ ವಿಭಾಗ ಮಾಡಿಕೊಂಡಿರಬಹುದು ಎಂದು ನುಡಿಯುತ್ತಾರೆ. ನಮ್ಮ ಕುಟುಂಬಕ್ಕೆ ಒಟ್ಟು 7 ಆಸ್ತಿಗಳಿದೆ. ದಾವೆಯಲ್ಲಿ ಅವಶ್ಯಕ ಸ್ವತ್ತುಗಳನ್ನು ಸೇರ್ಪಡೆ ಮಾಡಿಲ್ಲ ಎಂದರೆ ಸರಿಯಲ್ಲ. ಕೆಲವು ಒಟ್ಟು ಕುಟುಂಬದ ಸ್ವತ್ತುಗಳನ್ನು ಮಾರಾಟ ಮಾಡಿ ನನಗೆ ಹಣ ನೀಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಮಾರಾಟ ಮಾಡಿದ ಸ್ವತ್ತುಗಳನ್ನು ದಾವೆಯಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ಮಾರಿರುವ ಸ್ವತ್ತುಗಳ ವಿವರವನ್ನು ನೀಡಿದರೆ ಅವುಗಳನ್ನು ಸೇರ್ಪಡೆ ಮಾಡುತ್ತೇನೆ ಎಂದು ನುಡಿಯುತ್ತಾರೆ.

(**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ
ಸಹಿ/–
**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯದ ಕಡೂರು